

### ದೃಶ್ಯ 1

ಕಳೆದ ಜೂನ್‌ನಲ್ಲಿ ಕೇರಳದ ಪಾಲಕ್ಕಾಡ್‌ನಲ್ಲಿ ಗರ್ಭಿಣಿ ಆನೆಯೊಂದು ಪಟಾಕಿ ತುಂಬಿದ ಪೈನಾಪಲ್ ಸೇವಿಸಿತು. ಹಣ್ಣಿನೊಳಗಿದ್ದ ಪಟಾಕಿ ಬಾಯಲ್ಲೇ ಸ್ಫೋಟಿಸಿದ್ದರಿಂದ ಹದಿನಾಲ್ಕು ದಿನಗಳ ಜೀವನ್ಮರಣ ಹೋರಾಟ ನಡೆಸಿ ಅಸುನೀಗಿತು. ಅದರ ದಾರುಣ ಸಾವಿನ ದುಃಖ ದೇಶವನ್ನೆಲ್ಲ ವ್ಯಾಪಿಸಿಕೊಂಡಿತ್ತು. ಆನೆ ಬಾಯಿಗೆ ಪಟಾಕಿ ತುಂಬಿದ್ದ ಕಿಡಿಗೇಡಿ ಯುವಕರನ್ನು ಬಂಧಿಸಿ ಆನೆ ಕಾಲಿನಿಂದ ತುಳಿಸಬೇಕೆಂದು ಜನ ಸ್ಥಳೀಯ ನ್ಯಾಯಾಲಯವನ್ನು ಒತ್ತಾಯಿಸಿದ್ದರು.

### ದೃಶ್ಯ 2

ಬೆಂಗಳೂರಿನ ನ್ಯೂ ತರಗುಪೇಟೆಯ ಸೀತಾಪತಿ ಅಗ್ರಹಾರದ 'ಶ್ರೀ ಮಾರುತಿ ರೋಡ್‌ಲೈನ್ಸ್ ರಸ್ತೆ'ಯ ಗೋದಾಮುಗಳಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 80 ಪಟಾಕಿ ಬಾಕ್ಸ್‌ಗಳಲ್ಲಿ, ಎರಡು ಸ್ಫೋಟಗೊಂಡವು. ಆ ಸ್ಫೋಟದಲ್ಲಿ ದೇಹ ಛಿದ್ರ ಛಿದ್ರಗೊಂಡು ಇಬ್ಬರು ಸಾವಿಗೀಡಾದರು. ಅನೇಕರು ಗಾಯಗೊಂಡರು. ಈ ಘಟನೆ ನಡೆದದ್ದು ಕಳೆದ ಸೆಪ್ಟೆಂಬರ್‌ನಲ್ಲಿ.

### ದೃಶ್ಯ 3

ಪ್ರಸ್ತುತ ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣುತ್ತಿರುವ ಸುದೀಪ್ ನಟನೆಯ 'ಕೋಟಿಗೊಬ್ಬ 3' ಸಿನಿಮಾದ 'ಪಟಾಕಿ ಪೋರಿಯೋ' ಹಾಡು ಪ್ರೇಕ್ಷಕರನ್ನು ತಕತಕ ಕುಣಿಸುತ್ತಿದೆ. ಹಾಡಿಗೆ 'ಒನ್ಸ್‌ಮೋರ್'ಗಳ ಸುರಿಮಳೆಯಾಗುತ್ತಿದೆ.

ಮೇಲಿನ ಮೂರು ದೃಶ್ಯಗಳಲ್ಲೂ ಇರುವ ಸಾಮಾನ್ಯ ಅಂಶ ಪಟಾಕಿ.

ಬೆಳಕಿನ ಹಬ್ಬ ದೀಪಾವಳಿ ಸಂಭ್ರಮದ ದಿನಗಳಿವು. ಬಾಣ–ರಾಕೆಟ್ ಮುಗಿಲಿಗೆ ತೂರಿ; ಸುರುಸುರುಬತ್ತಿ ಬಿರುಸುಗಳ ಬೆಂಕಿಹೂಗಳಿಗೆ ಕಣ್ಣರಳಿಸಿ, ಭೂಚಕ್ರ ವಿಷ್ಣುಚಕ್ರಗಳನ್ನು ಗಿರಗಿರನೆ ತಿರುಗಿಸಿ, ಮಜಾ ಅನುಭವಿಸಲು ಪಟಾಕಿಪ್ರಿಯರು ಕಾದು ಕೂರುವ ದಿನಗಳಿವು. ಆದರೆ, ಸಾಂಪ್ರದಾಯಿಕ ಪಟಾಕಿಗಳಿಗಿದು ಕಾಲವಲ್ಲ. 'ಹಸಿರು ಪಟಾಕಿ'ಗಳಿಗಷ್ಟೇ ಅವಕಾಶ ಎಂದು ನ್ಯಾಯಾಲಯ ಕಟ್ಟುಮಾಡಿದೆ. ಸರ್ಕಾರ ಶಿಫಾರಸ್ಸು ಮಾಡಿರುವ ಹಸಿರು ಪಟಾಕಿ ಯಾವ್ಯಾವ ಅಂಗಡಿಗಳಲ್ಲಿ ಸಿಗುತ್ತವೆ, ಬೆಲೆ ಎಷ್ಟು ಎಂದು ಕೆಲವರು ಹುಡುಕಲು ಶುರು ಮಾಡಿದ್ದಾರೆ. 'ಹಳೆಯ ಮಾಮೂಲು ಪಟಾಕಿಗಳಿಂದ ಅಂಥ ಮಾಲಿನ್ಯವೇನೂ ಆಗದು' ಎಂದು ವಾದಿಸುತ್ತಿರುವ ಪಟಾಕಿ ಮಾರಾಟಗಾರರು, 'ಸಾಂಪ್ರದಾಯಿಕ ಪಟಾಕಿ ನಿಷೇಧ ಸಲ್ಲ' ಎಂದಿದ್ದಾರೆ.

ಕೊರೊನಾ ವೈರಾಣು ಮನುಷ್ಯನ ಶ್ವಾಸಕೋಶವನ್ನೇ ಗುರಿ ಆಗಿಸಿಕೊಂಡಿರುವುದರಿಂದ, ಪಟಾಕಿ ಹೊಮ್ಮಿಸುವ ವಿಷಕಾರಿ ಹೊಗೆ, ರೋಗಿಗಳನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುತ್ತವೆ ಎಂದು ಉತ್ತರ ಭಾರತದ ನಾಲ್ಕಾರು ರಾಜ್ಯಗಳು ಈ ಸಲದ ದೀಪಾವಳಿ – ರಾಮಲೀಲಾ ಹಬ್ಬದಲ್ಲಿ ಪಟಾಕಿ ಸುಡದಂತೆ ನಿರ್ಬಂಧ ಹೇರಿವೆ. ಪಟಾಕಿ ತಯಾರಿಸುವ ದೊಡ್ಡ ಉದ್ಯಮ ಹೊಂದಿರುವ ತಮಿಳುನಾಡು ರಾಜ್ಯದ ಮುಖ್ಯಮಂತ್ರಿ ಸ್ಟಾಲಿನ್ ಅವರು, ಪಟಾಕಿ ಸಿಡಿತ ಬ್ಯಾನ್ ಮಾಡಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು, 'ದಯವಿಟ್ಟು ಹಾಗೆ ಮಾಡಬೇಡಿ, ಪಟಾಕಿ ಉದ್ಯಮವನ್ನೇ ನಂಬಿಕೊಂಡ ಎಂಟು ಲಕ್ಷ ಜನರ ಅನ್ನ ಕಸಿದಂತಾಗುತ್ತದೆ, ಸರ್ಕಾರ ಹಾಗೂ ಸುಪ್ರೀಂಕೋರ್ಟ್ ನಿಗದಿಪಡಿಸಿರುವ ಹಸಿರು ಪಟಾಕಿಗಳನ್ನೇ ಉತ್ಪಾದಿಸಲಾಗಿದೆ. ನಿಮ್ಮ ನಿರ್ಧಾರವನ್ನು ಮರುಪರಿಶೀಲಿಸಿ, ರಫ್ತಿಗೆ, ಮಾರಾಟಕ್ಕೆ ಅವಕಾಶ ನೀಡಿ' ಎಂದು ಮನವಿಮಾಡಿದ್ದಾರೆ. ಮುಂದೇನಾಗುತ್ತದೆ ಕಾದು ನೋಡಬೇಕು. ಅಂದಹಾಗೆ, ಏನಿದು ಹಸಿರು ಪಟಾಕಿ?

## ಪರಿಸರಸ್ನೇಹಿ ಪಟಾಕಿ

ಮಾಮೂಲಿ ಪಟಾಕಿಗಳಿಗೆ ಹೋಲಿಸಿದರೆ 'ಹಸಿರು ಪಟಾಕಿ'ಗಳು ಅತ್ಯಂತ ಕಡಿಮೆ ವಾಯು ಹಾಗೂ ಶಬ್ದ ಮಾಲಿನ್ಯ ಉಂಟುಮಾಡುತ್ತವೆ. ಈ ಪಟಾಕಿಗಳಲ್ಲಿ ಲೀಥಿಯಂ, ಆರ್ಸೆನಿಕ್, ಬೇರಿಯಂ ನೈಟ್ರೇಟ್ ಮತ್ತು ಸತುವಿನಂಥ ಭಾರ

## ತೀರ್ಥಹಳ್ಳಿಯ ಎಳ್ಳಮಾವಾಸ್ಯೆ ಜಾತ್ರೆ

ಡಿಸೆಂಬರ್, ಜನವರಿ ತಿಂಗಳ ಕೊನೆ ಅಥವಾ ಮೊದಲ ವಾರದಲ್ಲಿ ತೀರ್ಥಹಳ್ಳಿಯಲ್ಲಿ ನಡೆಯುವ ಶ್ರೀ ರಾಮೇಶ್ವರ ದೇವರ ಜಾತ್ರೆ 'ಎಳ್ಳಮಾವಾಸ್ಯೆ ಜಾತ್ರೆ' ಎಂದೇ ಪ್ರಸಿದ್ಧ. ತೀರ್ಥಸ್ನಾನ, ರಥೋತ್ಸವ ಮತ್ತು ತೆಪ್ಪೋತ್ಸವಗಳೆಂದು ಮೂರು ದಿನ ಜಾತ್ರೆ ನಡೆಯುತ್ತದೆ. ಕೊನೆಯ ದಿನದ ರಾತ್ರಿ ಒಂದೆಡೆ ತೆಪ್ಪೋತ್ಸವದಲ್ಲಿ ಜನ ಸಂಭ್ರಮಿಸುತ್ತಿರುವಂತೆ, ತುಂಗಾನದಿಯ ಮೇಲಿನ ನೀಲಿ ಆಕಾಶ ಬಾಣ ಬಿರುಸುಗಳ ಚಿತ್ತಾರಕ್ಕೆ ಸಾಕ್ಷಿಯಾಗುತ್ತದೆ. ಲಕ್ಷಾಂತರ ಜನ ನದಿಯ ಎರಡೂಕಡೆ ಸೇರಿ ಪಟಾಕಿಗಳ ವರ್ಣ ವೈಭವವನ್ನು ಕಣ್ಣು ತುಂಬಿಕೊಳ್ಳುತ್ತಾರೆ. ಜಾತ್ರೆಯನ್ನು ರಂಗುರಂಗಾಗಿಸಲು ಸುಮಾರು ಐದಾರು ಲಕ್ಷ ರೂಪಾಯಿಗಳ ಪಟಾಕಿ ಸುಡುತ್ತಾರೆ. ಕಳೆದೆರಡು ವರ್ಷಗಳಲ್ಲಿ ಕೊರೊನಾದಿಂದಾಗಿ ಜಾತ್ರೆಯನ್ನು ಸರಳವಾಗಿ ಆಚರಿಸಲಾಗಿದೆ. ಪಟಾಕಿಯ ಸದ್ದಾಗಲೀ ಬೆಳಕಾಗಲೀ ಅಷ್ಟಾಗಿ ಇರಲಿಲ್ಲ.



